# ಕತೆಯ ಆತ್ಮಕಥೆ

ಕತೆಯೊಳಗಿನ ಕತೆ ಹೇಳುವ ಮನಸ್ಸಿನ ಓಟದ ಬಗ್ಗೆ ಚಿಂತಿಸಿದರೆ ಅದೇ ಒಂದು ಕಥೆ. ಒಂದು ಕತೆಯೆಂದರೆ ಅದು ಒಂದು ಸಮಾಜದ, ಸಂಸ್ಕೃತಿಯ ಜೀವಿಸುವಿಕೆಯ ಅನಾವರಣವಾಗಿರುತ್ತದೆ. ಒಂದು ಕತೆಯೆಂದರೆ ತನ್ನ ಜೀವಿತ ಕಾಲದ ಉಲ್ಲಾಸ, ಸಂಭ್ರಮ ಹಾಗೂ ಸೂತಕದ ದಿನಗಳನ್ನು ಹಿಡಿದಿಡುತ್ತದೆ. ಕತೆಯೆಂದರೆ ಅದು ಕೇವಲ ಕತೆಯಲ್ಲ. ಅದು ಜನಾಂಗದ ಜೀವಿಸುವಿಕೆಯ ಅಭಿವ್ಯಕ್ತಿಯೂ ಹೌದು. ಕತೆಯೊಂದು ಶುರುವಾಗಿದೆಯೆಂದರೆ ಒಂದು ಬದುಕಿನ ಎಳೆ ನಿಧಾನವಾಗಿ ಲೇಖಕನ ಅಂತರಂಗದ ಮೇಲೆ ಜನ್ಮತಳೆಯುತ್ತಾ ಅಷ್ಟೇ ನಿಧಾನವಾಗಿ ಅವನಿಂದ ಮುಕ್ತಗೊಂಡು ಹೊರಬರಲಾರಂಭಿಸುತ್ತದೆ. ಇದೊಂದು ಪ್ರಸವ ಕಾಲದ ವೇದನೆ. ಹುಟ್ಟಿದ ಮಗು ಆರೋಗ್ಯವೇ ಅಥವಾ ಅನಾರೋಗ್ಯವೇ ಎಂಬ ಪ್ರಶ್ನೆ ತಾಯಿ ಕರುಳಿನ ಲೇಖಕನಿಗೆ ಕಾಡಬೇಕು. ಇದು ಕೇವಲ ಕತೆಯೊಂದರ ಕತೆಯಲ್ಲ. ಅದು ಕವಿತೆಯ ಕತೆಯೂ ಹೌದು.

ಭಾರತೀಯ ಆಧುನಿಕ ಕಥಾ ಪರಂಪರೆಯ ಪ್ರಖ್ಯಾತ ಲೇಖಕ ಇಂತಿಜಾರ ಹುಸೇನ್ ಆಧುನಿಕ ಕತೆಗಳ ಬಗ್ಗೆ ಮಾತನಾಡುತ್ತ ಕೆಲವು ಮೌಲಿಕವಾದ ಅಂಶಗಳನ್ನು ಈ ಕೆಳಗಿನಂತೆ ಗುರ್ತಿಸುತ್ತಾರೆ. 'ನನ್ನ ಕತೆಯು ತುಂಬ ತೊಡಕಿನಲ್ಲಿದೆ. ನಾನು ಬರೆಯಲು ಕುಳಿತುಕೊಂಡಾಗಲೆಲ್ಲ ಏನಾದರೂ ದುರ್ಘಟನೆ ನಡೆಯುತ್ತದೆ. ಇಂಥದೊಂದು ಮಸೀದಿಯ ಮೇಲೆ ಭಯೋತ್ಪಾದಕರು ಆಕ್ರಮಣ ಮಾಡಿದರು. ಆಯಕಟ್ಟಿನ ಸ್ಥಳದಿಂದ ಮುಸುಕು ಧರಿಸಿ ಬಂದ ಆಯುಧದಾರಿಗಳು ನಮಾಜಿಗೆ ಕುಳಿತವರನ್ನು ಸುಟ್ಟು ಹಾಕಿದರು ಅಥವಾ ಧರ್ಮ ಗುರುಗಳ ಸಭೆಯ ಮೇಲೆ ಆಕ್ರಮಣ ಮಾಡಿದರು. ಕ್ಷಣಾರ್ಧದಲ್ಲಿ ಶೋಕಾಚರಣೆಯ ಸ್ಥಳದಲ್ಲಿ ಕೊಲೆ ನಡೆಯಿತು. ಅಥವಾ ಲಾರಿ ಶೆಡ್‌ನಲ್ಲಿ ಬಾಂಬ್ ಸ್ಫೋಟವಾಯಿತು. ರಸ್ತೆಯಲ್ಲಿ ತಿರುಗಾಡುತ್ತಿದ್ದ ಜನರು ಚೂರು ಚೂರಾಗಿ ಸಿಡಿದು ಹೋದರು. ಇಂತಹ ಸುದ್ದಿಯನ್ನು ಕೇಳಿದಾಗ ಮನಸ್ಸು ವ್ಯಾಕುಲಗೊಳ್ಳುತ್ತದೆ. ಕತೆ ಎಲ್ಲಿಯೋ ಕಾಲು ಕೀಳುತ್ತದೆ. ಪೆನ್ನು ಅಲ್ಲಿಗೆ ನಿಲ್ಲುತ್ತದೆ.

ಇಂತಹ ಮಾತು ಕತೆಗಾರನೊಬ್ಬ ಬದುಕುತ್ತಿರುವ ಸಂಕಟದ ದಿನಗಳನ್ನು ಮುಂದಿಡುತ್ತದೆ. ಹಿಂದಿನ ಚರಿತ್ರೆಗೆ ಹೋಗುವುದಾದರೆ ಮಾನವ ಆರಂಭದ ಆದಿಮ ಕಾಲದಲ್ಲಿ ತಾನು ಉಳಿಯಬೇಕೆಂದರೆ ಪ್ರಾಣಿಯೊಂದನ್ನು ಕೊಂದು ತಿನ್ನಲೇಬೇಕಾದ ಅನಿವಾರ್ಯತೆಯನ್ನು ಕಾಣುತ್ತೇವೆ. ಬುಡಕಟ್ಟು, ಪಂಗಡಗಳು, ರಾಜರು, ಚಕ್ರಾಧಿಪತಿಗಳು ತಮ್ಮ ಹೆಸರಿಗಾಗಿ ಎದುಗಿರಿದ್ದ ಇನ್ನೊಂದು ಸಮೂಹದ ಮೇಲೆ ದಾಳಿ ಮಾಡುತ್ತಾ ತಮ್ಮ ಹೆಸರನ್ನು ಉಳಿಸಿಕೊಂಡಿದೆ. ಯುದ್ಧವೆಂದರೆ ಆದಿಮ ಕಾಲದಲ್ಲಿ ಅನಾಗರಿಕರ ಗುಂಪೊಂದು ನಾಗರಿಕರ ಮೇಲೆ ಮಾಡುವ ದಾಳಿ ಎಂದೇ ಭಾವಿಸಲಾಗಿತ್ತು. ಇಂದು ದಾಳಿಯ ಸ್ವರೂಪಗಳು ಬದಲಾಗಿವೆ. ದೇವಿಯೆಂದು ಭಾವಿಸಲಾಗಿದ್ದ ಹೆಣ್ಣಿನ ಮೇಲಿನ ದಾಳಿ, ಅತ್ಯಾಚಾರವನ್ನು ಏನೆಂದು ವರ್ಣಿಸುವುದು. ಹೀಗಾಗಿ ಪ್ರತಿಕಾಲದ ಸಂಕಷ್ಟಗಳನ್ನು ಲೇಖಕ ಅನುಭವಿಸಲೇಬೇಕು ಹಾಗೂ ಬರೆಯಲೇಬೇಕು. ಇಲ್ಲವಾದರೆ ವಿಕ್ರಮ ಹೆಗಲ ಮೇಲೆ ಹೊತ್ತ ಬೇತಾಳ ಹೇಳುವಂತೆ ಸಮಸ್ಯೆಗೆ ಉತ್ತರ ಹೇಳದಿದ್ದರೆ ತಲೆ ಛಿದ್ರ ಛಿದ್ರವಾಗುವುದಿಲ್ಲ. ಸ್ವತಃ ಲೇಖಕನೇ ತನ್ನೊಳಗೆ ಛಿದ್ರ ಛಿದ್ರವಾಗುತ್ತಾನೆ.

ಭಯಗ್ರಸ್ತ ಕಾಲದಲ್ಲಿ, ಭಯೋತ್ಪಾದನೆಯ ಕಾಲದಲ್ಲಿ ಕತೆಗಾರ ಅಥವಾ ಕವಿ ಏನು ಮಾಡಬಲ್ಲ. ಕವಿತೆ ಅಥವಾ ಕತೆ ವ್ಯವಸ್ಥೆಯ ವಿರುದ್ಧ ಘೋಷಣೆ ಮಾಡಬಹುದೇ, ಮಾಡಿದರೆ ಏನಾಗುತ್ತದೆ– ಇಂತಹ ಹಲವು ಪ್ರಶ್ನೆಗಳನ್ನು ಸಮಾಜ ಮತ್ತು ಸಾಹಿತ್ಯದ ಸಂಬಂಧಗಳಲ್ಲಿ ಜೀವಿಸುವ ಲೇಖಕ ಎದುರಿಸಬೇಕಾಗುತ್ತದೆ. ನಯದ ಎಳೆಗಳಿಂದ ಕೂಡಿದ ಕತೆ, ಕವಿತೆಗಳೆಂಬ ಪ್ರಕಾರ ಈ ಸೃಜನಶೀಲ ಸಮಸ್ಯೆ ಎದುರಿಸುವುದು ಹೇಗೆ. ತನ್ನ ಕಾಲದ ಸಂಕಟಗಳನ್ನು ಚಿತ್ರಿಸುವುದು ಹೇಗೆ.

ಶಹರ ಜಾದೆ ಅಥವಾ ಅಲಿಫ್ ಲೈಲಾ ಎಂಬ ಕಾಲ್ಪನಿಕ ಕತೆಯ ಪಾತ್ರ ಈ ಸಂಕಟವನ್ನು ಎದುರಿಸುವ ಕ್ರಮ ರೂಪಕವಾಗಿದೆ. ಈ ಕತೆಯಲ್ಲಿ ನಿರ್ದಿಷ್ಟವಾದ ಸಂದೇಶ, ದರ್ಶನ, ಮೌಲ್ಯಗಳಿಲ್ಲದಿದ್ದರೂ ಸಂಕಷ್ಟವನ್ನು ನಿಧಾನವಾಗಿ ತಿಳಿಗೊಳಿಸುತ್ತಾ ಗೆಲ್ಲುವುದು ಹೇಗೆ ಎಂಬ ಜಾಣತನವಿದೆ. ಅಲ್ಲಿನ ರಾಜನದು ಒಂದು ವಿಚಿತ್ರ ಪ್ರವೃತ್ತಿಯಿತ್ತು. ಪ್ರತಿದಿನ ಒಬ್ಬ ರಾಜಕುಮಾರಿಯನ್ನು ತನ್ನ ಮಹಲಿಗೆ ತರುವುದು, ಅವಳೊಂದಿಗೆ ರಾತ್ರಿ ಕಳೆಯುವುದು ಆಗಿತ್ತು. ಬೆಳಗಾದ ನಂತರ ಅವಳ ತಲೆ ಕತ್ತರಿಸುತ್ತಿದ್ದ. ಶಹರಜಾದೆ ತಂದೆಯೊಡನೆ ಜಗಳವಾಡಿ ಹಠದಿಂದ ತಾನೆ ಈ ರಾಜನ ಮಹಲಿಗೆ ಬರುತ್ತಾಳೆ. ಅವಳು ಅರಸನೊಂದಿಗೆ ಜಗಳವಾಡಲಿಲ್ಲ, ಪ್ರಶ್ನಿಸಲಿಲ್ಲ, ಅತ್ತು ಕರೆಯಲಿಲ್ಲ. ಸೊಳ್ಳೆ ಪರದೆ ಕಟ್ಟಿದ ಪಲ್ಲಂಗದ ಮೇಲೆ ಕುಳಿತು ಕತೆ ಹೇಳಲಾರಂಭಿಸಿದಳು. ಈ ಕತೆ ಮುಗಿಯದೆ ಕೋಳಿ ಕೂಗಿ ಬೆಳಕು ಮೂಡಿದ ಮೇಲೂ ಮುಂದುವರೆಯುತ್ತದೆ. ರಾಜ ಮುಂದೇನಾಯ್ತು, ಮುಂದೇನಾಯ್ತು ಎನ್ನುತ್ತಿದ್ದಾನೆ. ಅವಳು ಹಗಲು ಹೊತ್ತಿನಲ್ಲಿ ಯಾರಾದರೂ ಕತೆ ಹೇಳುತ್ತಾರೆಯೇ, ಕೇಳುತ್ತಾರೆಯೇ ಎಂದು ಮುಂದೂಡಲಾರಂಭಿಸಿದಳು. ಹೀಗೆ ಸಾವಿರ ರಾತ್ರಿಗಳು ಕಳೆದವು, ಸಾವಿರ ಕತೆಗಳು ಹುಟ್ಟಿಕೊಂಡವು, ಸಾವಿರ ಕೋಳಿಗಳು ಕೂಗಿದವು.

ಕತೆ ಹೇಳುತ್ತಾ, ಕೇಳುತ್ತಾ ರಾಜ ಬದಲಾಗಿದ್ದ. ಹೆಂಗಸರನ್ನು ಕೊಲ್ಲುವುದಿಲ್ಲ ಎಂಬ ಪ್ರತಿಜ್ಞೆ ಮಾಡಿದ. ಶಹರಜಾದೆಯ ಪ್ರಾಣ ಉಳಿದು ಅವಳು ಅರಸನ ಮೆಚ್ಚಿನ ಪತ್ನಿಯಾದಳು. ಸಾವಿರಾರು ಹೆಣ್ಣು ಮಕ್ಕಳ ಪ್ರಾಣ ಉಳಿಸಿದಳು. ಇಲ್ಲಿ ಖಡ್ಗ ಹಿಡಿಯಲಿಲ್ಲ, ಹೋರಾಟ ಮಾಡಲಿಲ್ಲ, ನೆತ್ತರು ಹರಿಯಲಿಲ್ಲ. ಸಾವಿರಾರು ಜೀವಗಳು ಉಳಿದವು ಹಾಗೂ ಕೊಲೆಗಾರನ ಪ್ರತಿರೂಪಕವಾಗಿದ್ದ ಅರಸ ಬದಲಾಗಿದ್ದ. ಜೀವದ ಬೆಲೆಯನ್ನು ಅರಿತಿದ್ದ ಎಲ್ಲ ವಿವಿಧ ರೀತಿಯ ನೀತಿಯ ಸಮಸ್ಯೆಗಳು ಬೀದಿಗಳಿದು ಹೋರಾಟಕ್ಕೆ ಇಳಿದಿರುವಾಗ ಕ್ರೌರ್ಯದ ಪ್ರತಿರೂಪವಾದ, ಸರ್ವಾಧಿಕಾರಿಯೇ ಆದ ರಾಜನನ್ನು ಎದುರಿಸುವ ಕ್ರಮ ಯಾವುದು. ಇಲ್ಲಿ ಶಹರಜಾದಿಯ ಕ್ರಮ ಪ್ರಸ್ತುತವಾಗಲಾರದು. ಹೀಗಾಗಿ ಹೋರಾಟಗಳ, ಸಮಸ್ಯೆಗಳ ತೀವ್ರತೆಯೇ ತನ್ನ ದಾರಿಯನ್ನು ತಾನೇ ಕಂಡುಕೊಳ್ಳುತ್ತದೆ.

ಜನಪದರಿಂದ ಇಂದಿನವರೆಗೆ ಕತೆ ಹೇಳುವ ಪರಂಪರೆ ರಾತ್ರಿ ಎಂದೇ ಭಾವಿಸಿರುವುದರಿಂದ ಕಥನಗಳು ಕೇಳುಗರನ್ನು ಪ್ರಚೋದಿಸುತ್ತವೆ. ರಾತ್ರಿಯ ಗಂಡನೂ, ಹಗಲಿನ ಗಂಡನೂ ಒಂದೇ ಆಗಲಾರ ಎಂಬ ನಾಗಮಂಡಲದ ಮಿಥ್ಯೆ ಸತ್ಯವಾಗಿಯೇ ಪರಿಣಮಿಸುವ ಕಾಲಘಟ್ಟದಲ್ಲಿದ್ದೇವೆ. ಹೀಗೆ ಕತೆಯೆಂಬುದು ಕೇವಲ ಕತೆಯಲ್ಲ ಅದು ಒಂದು ಒಡಲ, ಒಂದು ಜನಾಂಗದ ಜೀವನ ಕ್ರಮವೂ ಹೌದು.

■ **ಅಮೃತಮತಿ**

## ಮಾತೇ ಮುತ್ತು

- ಇತಿಹಾಸವು ಒಂದು ರಾತ್ರಿಯ ನಾಟಕವಲ್ಲ, ಶತಾನು ಶತಕದ ಉದ್ಭವ; ಅದ್ಭುತ.
  —ದ.ರಾ. ಬೇಂದ್ರೆ
- ನಾಳೆ ಹೇಗೆ ಎಂಬ ಪ್ರಶ್ನೆಗಿಂತಲೂ ಇಂದು ಹೇಗೆ? ಎಂಬ ಪ್ರಶ್ನೆಯು ಬದುಕಿಗೆ ಮಹತ್ತರವಾಗಿ ಕಾಣುತ್ತದೆ.
  —ಶಿವರಾಮ ಕಾರಂತ
- ಗಂಡಸನ್ನು ಪಳಗಿಸುವುದಕ್ಕಾಗಿ ಮಾತ್ರವೇ ದೇವರು ಹೆಣ್ಣನ್ನು ಸೃಷ್ಟಿಸಿದ್ದಾನೆ.
  —ವಾಲ್ಟೇರ್
- ವಿಷಯಾತುರಂಗೆ ವಿವೇಕವಿಲ್ಲವೆಂಬುದು ಪುಸಿಯಲ್ಲ.
  —ಕನಕದಾಸ
- ನಾಗರಿಕತೆ ಎನ್ನುವ ರೋಗವು ಇರುವತನಕವೂ ಬಡತನ ಇದ್ದೇ ಇರುತ್ತದೆ.
  —ಸ್ವಾಮಿವಿವೇಕಾನಂದ
- ಪ್ರತಿಯೊಬ್ಬ ಮನುಷ್ಯನೂ ಒಂದು ವೃತ್ತದ ಕೇಂದ್ರಬಿಂದು, ಅದರ ಪರಿಧಿಯನ್ನು ಅವನು ದಾಟಲಾರ.
  —ಜೆ.ಜೆ. ಇಂಗಾಲ್ಸ್